# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1233 (1057) |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 23/12/2021 |
| ಉತ್ತರಿಸುವವರು | ಕಾರ್ಮಿಕ ಸಚಿವರು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ 2020 ಮತ್ತು 2021ರ ಕೋವಿಡ್ ಸಂಕಷ್ಟಕ್ಕೆ ಒಳಗಾದ ಕಾರ್ಮಿಕರಿಗೆ ಸರ್ಕಾರದಿಂದ ನಿಗದಿಪಡಿಸಿರುವ ಪರಿಹಾರಧನ ಎಷ್ಟು;</td><td>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿಗಳಿಂದ ಕೋವಿಡ್ ಸಂಕಷ್ಟಕ್ಕೆ ಒಳಗಾದ ಕಾರ್ಮಿಕರಿಗೆ ನೀಡಿರುವ ಪರಿಹಾರದ ವಿವರಗಳು ಈ ಕೆಳಗಿನಂತಿವೆ:<br><br><u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ</u><br>ಈ ಮಂಡಳಿ ವತಿಯಿಂದ ಕೋವಿಡ್-19 ರಿಂದ ಸಂಕಷ್ಟಕ್ಕೆ ಒಳಗಾದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ 2020ರಲ್ಲಿ ಕೋವಿಡ್ ಮೊದಲನೇ ಅಲೆಯ ಸಂದರ್ಭದಲ್ಲಿ ತಲಾ ರೂ. 5,000/-ಗಳ ಪರಿಹಾರ ಧನ ಮತ್ತು 2021ರ ಕೋವಿಡ್ ಎರಡನೇ ಸಂದರ್ಭದಲ್ಲಿ ತಲಾ ರೂ.3000/-ಗಳ ಪರಿಹಾರಧನ ನಿಗದಿಪಡಿಸಲಾಗಿದೆ.<br><br><u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ</u><br>ರಾಜ್ಯ ಸರ್ಕಾರವು ಘೋಷಿಸಿದಂತೆ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಈ ಕೆಳಕಂಡ ವರ್ಗಗಳ ಕಾರ್ಮಿಕರಿಗೆ ಕೋವಿಡ್-19ರ ಪರಿಹಾರವನ್ನು ನೀಡಲಾಗುತ್ತಿದೆ.<br><br>➢ ಕೋವಿಡ್-19ರ ಮೊದಲನೆ ಅಲೆಯ ಲಾಕ್‌ಡೌನ್ ಕಾರಣ ಸಂಕಷ್ಟಕ್ಕೊಳಗಾದ ಅಗಸ ಮತ್ತು ಕ್ಷೌರಿಕ ವೃತ್ತಿ ನಿರ್ವಹಿಸುತ್ತಿರುವ ಅರ್ಹ ಅಸಂಘಟಿತ ಕಾರ್ಮಿಕರಿಗೆ ತಲಾ ರೂ.5000/- ಗಳ ಒಂದು ಬಾರಿಯ ನೆರವು ನೀಡಲಾಗುತ್ತಿದೆ.<br>➢ ಕೋವಿಡ್-19ರ ಎರಡನೇ ಅಲೆಯ ಲಾಕ್‌ಡೌನ್ ಕಾರಣ ಸಂಕಷ್ಟಕ್ಕೊಳಗಾದ 11 ವರ್ಗಗಳ ಅರ್ಹ ಅಸಂಘಟಿತ ಕಾರ್ಮಿಕರಾದ ಅಗಸರು, ಕ್ಷೌರಿಕರು, ಗೃಹಕಾರ್ಮಿಕರು, ಟೈಲರ್‌ಗಳು, ಮೆಕ್ಯಾನಿಕ್, ಚಿಂದಿ ಆಯುವವರು, ಹಮಾಲರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿಕಾರ್ಮಿಕರಿಗೆ ತಲಾ ರೂ.2000/- ಗಳ ಒಂದು ಬಾರಿಯ ನೆರವು ನೀಡಲಾಗುತ್ತಿದೆ.</td></tr>
</table>

| | | |
|---|---|---|
| ಆ) | ಇದುವರೆಗೂ ಎಷ್ಟು ಜನ ಕಾರ್ಮಿಕರಿಗೆ ಪರಿಹಾರ ಧನವನ್ನು ನೀಡಲಾಗಿದೆ; ಉಳಿದ ಕಾರ್ಮಿಕರಿಗೆ ಯಾವ ಕಾಲಮಿತಿಯೊಳಗೆ ಪರಿಹಾರ ಧನವನ್ನು ನೀಡಲಾಗುವುದು; (ಜಿಲ್ಲಾವಾರು ಮಾಹಿತಿ ನೀಡುವುದು) | **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂ.**<br><br>ಕೋವಿಡ್ ಮೊದಲನೇ ಅಲೆಯ ಸಂದರ್ಭದಲ್ಲಿ ತಲಾ ರೂ. 5,000/-ಗಳಂತೆ ಒಟ್ಟು 16,48,431 ಫಲಾನುಭವಿಗಳಿಗೆ ರೂ.824.21 ಕೋಟಿಗಳ ಪರಿಹಾರ ಧನ ಮತ್ತು ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ತಲಾ ರೂ. 3,000/-ಗಳಂತೆ ಒಟ್ಟು 19,02,018 ಫಲಾನುಭವಿಗಳಿಗೆ ರೂ.570.60 ಕೋಟಿಗಳ ಪರಿಹಾರ ಧನ ಮಂಡಳಿವತಿಯಿಂದ ವಿತರಿಸಲಾಗಿರುತ್ತದೆ.<br>ಜಿಲ್ಲಾವಾರು ವಿವರ **ಅನುಬಂಧ-01** ಮತ್ತು **ಅನುಬಂಧ-02** ರಲ್ಲಿ ಲಗತ್ತಿಸಿದೆ.<br><br>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ**<br>ರಾಜ್ಯ ಸರ್ಕಾರವು ಕೋವಿಡ್-19ರ ಲಾಕ್‌ಡೌನ್ ಕಾರಣ ಸಂಕಷ್ಟಕ್ಕೊಳಗಾದ ಅಸಂಘಟಿತ ಕಾರ್ಮಿಕರಿಗೆ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ವಿತರಿಸಲಾದ ಸೌಲಭ್ಯಗಳ ವಿವರ ಈ ಕೆಳಗಿನಂತಿದೆ:-<br><br>**ಕೋವಿಡ್-19ರ ಮೊದಲನೇ ಅಲೆಯ ವಿಶೇಷ ಪ್ಯಾಕೇಜ್:** ಕೋವಿಡ್-19ರ ಮೊದಲನೆ ಅಲೆಯಲ್ಲಿ 1,24,968 ಅರ್ಹ ಕಾರ್ಮಿಕರಿಗೆ ತಲಾ ರೂ.5000/- ಗಳಂತೆ ಒಟ್ಟು ರೂ.62.48 ಕೋಟಿಗಳ ಪರಿಹಾರವನ್ನು ನೀಡಲಾಗಿದ್ದು, ಬಾಕಿ ಉಳಿದ ಅರ್ಜಿಗಳು ತಾಂತ್ರಿಕ ಕಾರಣ ಮತ್ತು ಷರತ್ತುಗಳನ್ನು ಪೂರೈಸದ ಕಾರಣ ಬಾಕಿ ಉಳಿದಿದ್ದು, ಷರತ್ತುಗಳನ್ನು ಪೂರೈಸಿದ ನಂತರ ಅರ್ಹ ಕಾರ್ಮಿಕರಿಗೆ ನೆರವಿನ ಮೊತ್ತವನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>**ಪ್ರಸ್ತುತ ವಿತರಿಸಲಾದ ಕಾರ್ಮಿಕರ ಜಿಲ್ಲಾವಾರು ವಿವರವನ್ನು ಅನುಬಂಧ-03 ರಲ್ಲಿ ಒದಗಿಸಿದೆ.**<br><br>ಅ) **ಕೋವಿಡ್-19ರ ಎರಡನೇ ಅಲೆಯ ವಿಶೇಷ ಪ್ಯಾಕೇಜ್:** ಕೋವಿಡ್-19ರ ಎರಡನೇ ಅಲೆಯಲ್ಲಿ 11,82,307 ಅರ್ಹ ಕಾರ್ಮಿಕರಿಗೆ ತಲಾ ರೂ.2000/- ಗಳಂತೆ ಒಟ್ಟು ರೂ236.46 ಕೋಟಿಗಳ ಪರಿಹಾರವನ್ನು ನೀಡಲಾಗಿದ್ದು, ಬಾಕಿ ಉಳಿದ ಅರ್ಜಿಗಳ ಪರಿಶೀಲನೆ ಕಾರ್ಯ ನಡೆಯುತ್ತಿದ್ದು, ಪರಿಶೀಲನೆ ಪೂರ್ಣಗೊಂಡ ನಂತರ ಅರ್ಹ ಕಾರ್ಮಿಕರಿಗೂ ನೆರವಿನ ಮೊತ್ತವನ್ನು ವಿತರಿಸಲಾಗುವುದು.<br>**ಪ್ರಸ್ತುತ ವಿತರಿಸಲಾದ ಕಾರ್ಮಿಕರ ಜಿಲ್ಲಾವಾರು ವಿವರವನ್ನು ಅನುಬಂಧ-04 ರಲ್ಲಿ ಒದಗಿಸಿದೆ.** |

| | | |
|---|---|---|
| ಇ) | ಕಾರ್ಮಿಕರಿಗೆ ಪರಿಹಾರಧನ ನೀಡುವಾಗ ಅನುಸರಿಸುವ ನಿಯಮ ಮತ್ತು ಮಾನದಂಡಗಳೇನು; | **<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ</u>**<br>ಕೋವಿಡ್ -19 ರ ಪರಿಹಾರಧನವನ್ನು ಪಡೆಯಲು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಾಗಿ ಮಂಡಳಿಯ ಫಲಾನುಭವಿಯಾಗಿ ನೋಂದಣಿಯಾಗಿರಬೇಕು. ಅಂತಹ ನೋಂದಾಣಿಯಾದ ಫಲಾನುಭವಿಗಳ ಖಾತೆಯು ಆಧಾರ್ ಲಿಂಕ್ ಆಗಿದ್ದಲ್ಲಿ ಅವರ ಖಾತೆಗೆ ನೇರವಾಗಿ ಮಂಡಳಿವತಿಯಿಂದ ಪರಿಹಾರ ಧನವನ್ನು ಜಮೆ ಮಾಡಲಾಗುತ್ತಿದೆ.<br><br>**<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ</u>**<br>ಕೋವಿಡ್-19ರ ಮೊದಲನೇ ಹಾಗೂ ಎರಡನೇ ಅಲೆಯ ಸಂಬಂಧ ಸರ್ಕಾರದಿಂದ ಘೋಷಿಸಲಾಗಿದ್ದ, ಲಾಕ್‌ಡೌನ್ ಪರಿಣಾಮದಿಂದ ಸಂಕಷ್ಟಕ್ಕೊಳಗಾದ ಅಸಂಘಟಿತ ಕಾರ್ಮಿಕರಿಗೆ ವಿಶೇಷ ಪ್ಯಾಕೇಜ್‌ನಡಿ ನೀಡಲಾಗುತ್ತಿರುವ ಪರಿಹಾರವನ್ನು ವಿತರಿಸಲು ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅದರನ್ವಯ ಪರಿಹಾರ ವಿತರಿಸಲಾಗುತ್ತಿದ್ದು, ಅದರ ವಿವರ ಈ ಕೆಳಕಂಡಂತಿದೆ:-<br><br>**<u>ಅನುಸರಿಸುವ ನಿಯಮ/ಮಾನದಂಡ:</u>**<br>• ಮೊದಲನೇ ಅಲೆಯ ವಿಶೇಷ ಪ್ಯಾಕೇಜ್ (ರೂ.5000/-ಗಳ ಒಂದು ಬಾರಿಯ ನೆರವು) ಅಗಸ ಮತ್ತು ಕ್ಷೌರಿಕ ವೃತ್ತಿಯಲ್ಲಿ ತೊಡಗಿಕೊಂಡ ಕಾರ್ಮಿಕರು ಹಾಗೂ ಎರಡನೇ ಅಲೆಯ ವಿಶೇಷ ಪ್ಯಾಕೇಜ್ (ರೂ.2000/-ಗಳ ಒಂದು ಬಾರಿಯ ನೆರವು) 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ" ವೃತ್ತಿಯಲ್ಲಿ ತೊಡಗಿಕೊಂಡ ಕಾರ್ಮಿಕರು ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ.<br>• ಸೇವಾಸಿಂಧು ಪೋರ್ಟಲ್‌ನಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿ ಸಲ್ಲಿಸುವುದು<br>• ವಯೋಮಿತಿ: 18 ರಿಂದ 65 ವರ್ಷಗಳು<br>• ಕುಟುಂಬದಲ್ಲಿ ಒಬ್ಬರಿಗೆ ಮಾತ್ರ<br>• ಬಿಪಿಎಲ್ ಕಾರ್ಡ್ ಹೊಂದಿದವರಿಗೆ ಮಾತ್ರ<br>• ಆಧಾರ್ ಸಂಖ್ಯೆ ಲಿಂಕ್ ಆಗಿರುವ ಬ್ಯಾಂಕ್ ಖಾತೆ ಹೊಂದಿರುವುದು ಕಡ್ಡಾಯ<br>• ವೃತ್ತಿ ನಿರ್ವಹಿಸುತ್ತಿರುವ ಕುರಿತು ಅಧಿಕಾರಿಗಳಿಂದ/ಮಾಲೀಕರಿಂದ ಪಡೆದ ಉದ್ಯೋಗ ದೃಢೀಕರಣ ಪ್ರಮಾಣ ಪತ್ರದೊಂದಿಗೆ ಅರ್ಜಿ ಸಲ್ಲಿಸುವುದು. |

| | | |
|---|---|---|
| ಈ) | ಬೇರೆ ಬೇರೆ ರಾಜ್ಯದಿಂದ ಕೆಲಸವನ್ನು ಅರಸಿ ಕರ್ನಾಟಕಕ್ಕೆ ಬಂದು ಕೋವಿಡ್ ಸಂಕಷ್ಟದಲ್ಲಿ ಸಿಲುಕಿದ ಕಾರ್ಮಿಕರಿಗೆ ಸರ್ಕಾರದಿಂದ ಪರಿಹಾರ ನೀಡಲಾಗಿದೆಯೇ; ಹಾಗಿದ್ದಲ್ಲಿ ಯಾವ ರೀತಿಯ ಪರಿಹಾರವನ್ನು ನೀಡಲಾಗಿದೆ? | **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ**<br>ಈ ಮಂಡಳಿಯ ವತಿಯಿಂದ ಕೋವಿಡ್-19ರ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೊಳಗಾದ ಪಡಿತರ ಚೀಟಿ ರಹಿತ ಅಸಂಘಟಿತ ವಲಸೆ ಕಾರ್ಮಿಕರಿಗೆ ಸಂಬಂಧಿಸಿದಂತೆ ಫುಡ್-ಕಿಟ್‌ಗಳನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮೂಲಕ ಖರೀದಿಸಿ ವಿತರಿಸಲಾಗಿರುತ್ತದೆ.<br><br>**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ**<br>ಮಂಡಳಿಯಲ್ಲಿ ನೋಂದಾಯಿತರಾಗಿರುವ ವಲಸೆ ಕಾರ್ಮಿಕರು ಸೇರಿದಂತೆ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಮಂಡಳಿವತಿಯಿಂದ ಕೋವಿಡ್-19ರ ಮೊದಲ ಅಲೆ ಮತ್ತು ಎರಡನೇ ಅಲೆಯ ಸಂದರ್ಭದಲ್ಲಿ ಈ ಕೆಳಕಂಡ ಪರಿಹಾರ ನೀಡಲಾಗಿದೆ:<br><br>**ಮೊದಲ ಅಲೆಯ ಸಂದರ್ಭದಲ್ಲಿ:**<br>1. ಮಾನ್ಯ ಮುಖ್ಯಮಂತ್ರಿಗಳ ಘೋಷಣೆಯಂತೆ 16,48,431 ಮಂಡಳಿಯ ಫಲಾನುಭವಿಗಳಿಗೆ ತಲಾ ರೂ.5,000/- ಗಳಂತೆ ಒಟ್ಟು ರೂ. 824.21ಕೋಟಿ ಸಹಾಯಧನವನ್ನು ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿರುತ್ತದೆ.<br>2. ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ 7.15 ಲಕ್ಷ ಆಹಾರ ಸಾಮಾಗ್ರಿಗಳ ಕಿಟ್ ಗಳನ್ನು ತಯಾರಿಸಿ ವಿತರಿಸಲಾಗಿರುತ್ತದೆ.<br>3. ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಲಾಕ್‌ಡೌನ್ ಪ್ರಾರಂಭದಿಂದ ಇದುವರೆಗೂ 89.87 ಲಕ್ಷ ಸಿದ್ಧಪಡಿಸಿದ ಆಹಾರದ ಪ್ಯಾಕೆಟ್ ಗಳನ್ನು ವಿತರಿಸಲಾಗಿರುತ್ತದೆ.<br>4. ಕರ್ನಾಟಕದಿಂದ ತಮ್ಮ ಸ್ವಂತ ರಾಜ್ಯಗಳಿಗೆ ರೈಲು ಮೂಲಕ ತೆರಳುವ ಕಾರ್ಮಿಕರಿಗೆ ನೀರಿನ ಬಾಟಲ್, ಹಣ್ಣು ಹಾಗೂ ಮೊಟ್ಟೆಯನ್ನು ಒದಗಿಸಲಾಗಿರುತ್ತದೆ.<br><br>**ಎರಡನೇ ಅಲೆಯ ಸಂದರ್ಭದಲ್ಲಿ**<br>1. ತಲಾ ರೂ.3,000/- ಗಳಂತೆ ಸುಮಾರು **19,02,018** ಕಾರ್ಮಿಕರಿಗೆ ಒಟ್ಟುರೂ.**570.60** ಕೋಟಿ ಮೊತ್ತವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ(DBT) ಮೂಲಕ ಜಮಾ ಮಾಡಲಾಗಿದೆ. ಉಳಿದ ಫಲಾನುಭವಿಗಳಿಗೆ ಬ್ಯಾಂಕ್‌ಖಾತೆಗೆ ರೂ. 3,000/- ಗಳನ್ನು ಜಮಾ ಮಾಡಲು ಕ್ರಮವಹಿಸಲಾಗುತ್ತಿದೆ.<br>2. ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಆಹಾರ ಸಮಸ್ಯೆಯನ್ನು ನೀಗಿಸಲು ರಾಜ್ಯಾದ್ಯಂತ 23.42 ಲಕ್ಷ ಕಾರ್ಮಿಕರಿಗೆ ಆಹಾರ ಸಾಮಾಗ್ರಿಗಳ ಕಿಟ್ ವಿತರಿಸಲಾಗಿದೆ. |

| | | |
|---|---|---|
| | | 3. ಮಂಡಳಿಯ ವತಿಯಿಂದ ನೋಂದಾಯಿತ ಅಸಂಘಟಿತ ಕಾರ್ಮಿಕರ ಸಮಸ್ಯೆಯನ್ನು ನೀಗಿಸಲು ರಾಜ್ಯಾದ್ಯಂತ 3.80 ಲಕ್ಷ ಕಾರ್ಮಿಕರಿಗೆ ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ವಿತರಿಸಲಾಗಿದೆ.<br>ನೋಂದಾಯಿತ ಅರ್ಹ 21.07 ಲಕ್ಷ ಕಾರ್ಮಿಕರಿಗೆ ಸುರಕ್ಷತಾ ಮತ್ತು ನೈರ್ಮಲ್ಯ ಕಿಟ್‌ಗಳನ್ನು ವಿತರಿಸಲಾಗಿದೆ. |

**ಕಾಇ 559 ಎಲ್‌ಇಟಿ 2021**

*(ಅರಬೈಲ್ ಶಿವರಾಮ ಹೆಬ್ಬಾರ್)*
**ಕಾರ್ಮಿಕ ಸಚಿವರು**

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1233ಕ್ಕೆ ಅನುಬಂಧ-01

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಕೋವಿಡ್-19 ಹಿನ್ನಲೆಯಲ್ಲಿ ರೂ.5000/- ಗಳ ಸಹಾಯಧನವನ್ನು ಪಾವತಿಸಿರುವ ಜಿಲ್ಲಾವಾರು ವಿವರ

| ಕ್ರ.ಸಂ | ಜಿಲ್ಲೆ | ಮಂಡಳಿಯಿಂದ ಡಿಬಿಟಿ ಆಧಾರ್ ಮೂಲಕ ಪಾವತಿಸಿದ ಕಾರ್ಮಿಕರ ಸಂಖ್ಯೆ | ಮಂಡಳಿಯಿಂದ ಎನ್‌ಇಎಫ್‌ಟಿ ಮೂಲಕ ಪಾವತಿಸಿದ ಕಾರ್ಮಿಕರ ಸಂಖ್ಯೆ | ಕಾರ್ಮಿಕ ಅಧಿಕಾರಿಗಳಿಂದ ಪಾವತಿ ಮಾಡಲಾದ ಕಾರ್ಮಿಕರ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 15579 | 3393 | 10555 |
| 2 | ಬೆಳಗಾವಿ | 41674 | 11281 | 17026 |
| 3 | ಬಳ್ಳಾರಿ | 45372 | 4036 | 33433 |
| 4 | ಬೆಂಗಳೂರು | 36357 | 5378 | 42032 |
| 5 | ಬೀದರ್ | 43651 | 5117 | 22846 |
| 6 | ಬಿಜಾಪುರ | 17613 | 3773 | 24239 |
| 7 | ಚಾಮರಾಜನಗರ | 40290 | 1117 | 13252 |
| 8 | ಚಿಕ್ಕಬಳ್ಳಾಪುರ | 15980 | 1031 | 6735 |
| 9 | ಚಿಕ್ಕಮಗಳೂರು | 19550 | 9040 | 6139 |
| 10 | ಚಿತ್ರದುರ್ಗ | 60049 | 3927 | 14556 |
| 11 | ದಾವಣಗೆರೆ | 58869 | 3194 | 22245 |
| 12 | ಗದಗ | 11999 | 5102 | 6748 |
| 13 | ಹಾಸನ | 54320 | 3401 | 15182 |
| 14 | ಹಾವೇರಿ | 13247 | 11138 | 19991 |
| 15 | ಹುಬ್ಬಳ್ಳಿ | 48299 | 7813 | 20973 |
| 16 | ಕಲಬುರಗಿ | 40707 | 6335 | 37875 |
| 17 | ಕಾರವಾರ | 47485 | 13792 | 17664 |
| 18 | ಕೋಲಾರ | 44575 | 726 | 21288 |
| 19 | ಕೊಪ್ಪಳ | 65794 | 5757 | 5348 |
| 20 | ಮಡಿಕೇರಿ | 951 | 468 | 1443 |
| 21 | ಮಂಡ್ಯ | 24824 | 1643 | 14622 |
| 22 | ಮಂಗಳೂರು | 35657 | 7593 | 13132 |
| 23 | ಮೈಸೂರು | 34030 | 2852 | 28120 |
| 24 | ರಾಯಚೂರು | 38789 | 2080 | 13279 |
| 25 | ರಾಮನಗರ | 9638 | 1059 | 18393 |
| 26 | ಶಿವಮೊಗ್ಗ | 92815 | 7055 | 13569 |
| 27 | ತುಮಕೂರು | 23338 | 2317 | 15527 |
| 28 | ಉಡುಪಿ | 17430 | 7409 | 7759 |
| 29 | ಯಾದಗಿರಿ | 15774 | 4269 | 7708 |
| | ಒಟ್ಟು | 10,14,656 | 142096 | 491679 |
| | ಒಟ್ಟು | 16,48,431 | | |
| | ಪಾವತಿಸಲಾಗಿರುವ ಒಟ್ಟು ಮೊತ್ತ | 824,21,55,000 | | |

ಆಯುಕ್ತರು
ಕಾರ್ಮಿಕ ಇಲಾಖೆ

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1233ಕ್ಕೆ ಅನುಬಂಧ-02

**ಕೋವಿಡ್-19, 2ನೇ ಅಲೆ ಸಂದರ್ಭದಲ್ಲಿ ಮಂಡಳಿಯವತಿಯಿಂದ ಒಂದು ಬಾರಿ ಸಹಾಯ ಧನ ಬಿಡುಗಡೆ ಮಾಡಿದ ಜಿಲ್ಲಾವಾರು ವಿವರ**

| DISTRICT NAME | No. of Beneficiary who have been credited of Rs.3000/- |
|---|---|
| BAGALKOT | 53987 |
| BANGALORE | 153631 |
| BELGAUM | 99116 |
| BELLARY | 57649 |
| BIDAR | 138277 |
| BIJAPUR | 57434 |
| CHAMARAJA NAGAR | 28984 |
| CHIKBALLAPUR | 21774 |
| CHIKMAGALUR | 49893 |
| CHITRADURGA | 61804 |
| DAKSHINA KANNADA | 44555 |
| DAVANAGERE | 79614 |
| DHARWAD | 69581 |
| GADAG | 37422 |
| HASSAN | 66980 |
| HAVERI | 103042 |
| GULBARGA | 154045 |
| KODAGU | 3528 |
| KOLAR | 51519 |
| KOPPAL | 67109 |
| MANDYA | 18362 |
| MYSORE | 59302 |
| RAICHUR | 35616 |
| RAMANAGARAM | 25967 |
| SHIMOGA | 81695 |
| TUMKUR | 46656 |
| UDUPI | 30304 |
| UTTARA KANNADA | 56011 |
| YADGIRI | 52985 |
| Yet to filter with the District | 95176 |
| **Total** | **19,02,018** |

ಆಯುಕ್ತರು
ಕಾರ್ಮಿಕ ಇಲಾಖೆ

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1233ಕ್ಕೆ ಅನುಬಂಧ-03

ಒಂದು ಬಾರಿ ನೆರವು ರೂ.5000/-ಗಳ ನೆರವನ್ನು ಪಡೆದ ಫಲಾನುಭವಿಗಳ ಜಿಲ್ಲಾವಾರು ವಿವರ;-

| ಕ್ರ.ಸಂ | ಜಿಲ್ಲೆಯ ಹೆಸರು | ಕ್ಷೌರಿಕ | ಅಗಸ | ಒಟ್ಟು | ಮೊತ್ತ ತಲಾ ರೂ.2000/- |
|---|---|---|---|---|---|
| 1 | ಬಾಗಲಕೋಟೆ | 2050 | 934 | 2984 | 14920000 |
| 2 | ಬಳ್ಳಾರಿ | 2715 | 6740 | 9455 | 47275000 |
| 3 | ಬೆಳಗಾವಿ | 4945 | 2565 | 7510 | 37550000 |
| 4 | ಬೆಂಗಳೂರು ಗ್ರಾಮಾಂತರ | 1172 | 1089 | 2261 | 11305000 |
| 5 | ಬೆಂಗಳೂರು ನಗರ | 5222 | 5131 | 10353 | 51765000 |
| 6 | ಬೀದರ್ | 1527 | 1358 | 2885 | 14425000 |
| 7 | ಚಾಮರಾಜನಗರ | 894 | 2746 | 3640 | 18200000 |
| 8 | ಚಿಕ್ಕಬಳ್ಳಾಪುರ | 1957 | 2712 | 4669 | 23345000 |
| 9 | ಚಿಕ್ಕಮಗಳೂರು | 878 | 481 | 1359 | 6795000 |
| 10 | ಚಿತ್ರದುರ್ಗ | 1567 | 3314 | 4881 | 24405000 |
| 11 | ದಕ್ಷಿಣ ಕನ್ನಡ | 916 | 310 | 1226 | 6130000 |
| 12 | ದಾವಣಗೆರೆ | 1491 | 2277 | 3768 | 18840000 |
| 13 | ಧಾರವಾಡ | 1980 | 1984 | 3964 | 19820000 |
| 14 | ಗದಗ | 1724 | 1164 | 2888 | 14440000 |
| 15 | ಹಾಸನ | 1556 | 1770 | 3326 | 16630000 |
| 16 | ಹಾವೇರಿ | 1805 | 2077 | 3882 | 19410000 |
| 17 | ಕಲಬುರಗಿ | 3243 | 1994 | 5237 | 26185000 |
| 18 | ಕೊಡಗು | 367 | 221 | 588 | 2940000 |
| 19 | ಕೋಲಾರ | 2157 | 2118 | 4275 | 21375000 |
| 20 | ಕೊಪ್ಪಳ | 2048 | 2148 | 4196 | 20980000 |
| 21 | ಮಂಡ್ಯ | 2121 | 3804 | 5925 | 29625000 |
| 22 | ಮೈಸೂರು | 2988 | 4679 | 7667 | 38335000 |
| 23 | ರಾಯಚೂರು | 2402 | 5084 | 7486 | 37430000 |
| 24 | ರಾಮನಗರ | 948 | 1207 | 2155 | 10775000 |
| 25 | ಶಿವಮೊಗ್ಗ | 1385 | 735 | 2120 | 10600000 |
| 26 | ತುಮಕೂರು | 2314 | 4253 | 6567 | 32835000 |
| 27 | ಉಡುಪಿ | 965 | 293 | 1258 | 6290000 |

| | | | | | |
|---|---|---|---|---|---|
| 28 | ಉತ್ತರ ಕನ್ನಡ | 878 | 616 | 1494 | 7470000 |
| 29 | ವಿಜಯಪುರ | 2642 | 1212 | 3854 | 19270000 |
| 30 | ಯಾದಗಿರಿ | 1320 | 1775 | 3095 | 15475000 |
| | ಒಟ್ಟು | 58177 | 66791 | 124968 | 624840000 |

ಆಯುಕ್ತರು
ಕಾರ್ಮಿಕ ಇಲಾಖೆ

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1233ಕ್ಕೆ
ಅನುಬಂಧ–04

ಒಂದು ಬಾರಿ ನೆರವು ರೂ.2000/–ಗಳ ನೆರವನ್ನು ಪಡೆದ ಫಲಾನುಭವಿಗಳ ಜಿಲ್ಲಾವಾರು ವಿವರ

## 11 Categoires of Unorganised workers district wise Payment Data for one time financial benefit of Rs 2000/-Each

| SL. NO. | Districts | Barbers/ ಕ್ಷೌರಿಕರು | Domestic Workers/ ಗೃಹಕಾರ್ಮಿಕರು | Gold Smith/ ಅಕ್ಕಸಾಲಿಗರು | Hamalis/ ಹಮಾಲರು | Iron Smiths/ ಕಮ್ಮಾರರು | Kiln Workers/ ಮಂಡಕ್ಕಿ ಭಟ್ಟಿ ಕಾರ್ಮಿಕರು | Mechanics /ಮೆಕ್ಯಾನಿಕ್ | Potters/ ಕುಂಬಾರರು | Rag Pickers/ ಚಿಂದಿ ಆಯುವವರು | Tailors/ ಟೈಲರ್‌ಗಳು | Washer men/ ಅಗಸರು | Grand Total | Amount of Rs2000/-Each |
|---|---|---|---|---|---|---|---|---|---|---|---|---|---|---|
| 1 | ಬಾಗಲಕೋಟೆ | 2121 | 6903 | 215 | 1692 | 413 | 174 | 949 | 526 | 277 | 16920 | 1084 | 31274 | 62548000 |
| 2 | ಬಳ್ಳಾರಿ | 2800 | 10410 | 210 | 5280 | 430 | 348 | 1226 | 759 | 409 | 39108 | 6982 | 67962 | 135924000 |
| 3 | ಬೆಳಗಾವಿ | 5058 | 27240 | 899 | 8108 | 1186 | 976 | 2742 | 2207 | 596 | 65927 | 3504 | 118443 | 236886000 |
| 4 | ಬೆಂಗಳೂರು ಗ್ರಾಮಾಂತರ | 1181 | 2516 | 98 | 205 | 44 | 30 | 525 | 231 | 25 | 9488 | 1303 | 15646 | 31292000 |
| 5 | ಬೆಂಗಳೂರು ನಗರ | 5487 | 56026 | 391 | 2724 | 444 | 610 | 3736 | 793 | 1037 | 39801 | 6624 | 117673 | 235346000 |
| 6 | ಬೀದರ್ | 1625 | 8229 | 101 | 4115 | 154 | 446 | 1730 | 343 | 263 | 13038 | 1556 | 31600 | 63200000 |
| 7 | ಚಾಮರಾಜನಗರ | 912 | 5761 | 183 | 479 | 376 | 68 | 606 | 1062 | 119 | 16375 | 3063 | 29004 | 58008000 |
| 8 | ಚಿಕ್ಕಬಳ್ಳಾಪುರ | 1937 | 5972 | 176 | 974 | 59 | 143 | 980 | 400 | 405 | 13372 | 2812 | 27230 | 54460000 |
| 9 | ಚಿಕ್ಕಮಗಳೂರು | 894 | 2646 | 172 | 517 | 95 | 42 | 735 | 284 | 186 | 10175 | 573 | 16319 | 32638000 |
| 10 | ಚಿತ್ರದುರ್ಗ | 1525 | 6229 | 305 | 2069 | 362 | 295 | 862 | 483 | 326 | 18102 | 3390 | 33948 | 67896000 |
| 11 | ದಕ್ಷಿಣ–ಕನ್ನಡ | 1017 | 7104 | 448 | 1282 | 66 | 41 | 789 | 190 | 293 | 13470 | 350 | 25050 | 50100000 |
| 12 | ದಾವಣಗೆರೆ | 1487 | 5065 | 348 | 1717 | 163 | 1158 | 822 | 432 | 493 | 20309 | 2459 | 34453 | 68906000 |
| 13 | ಧಾರವಾಡ | 2098 | 10028 | 240 | 2288 | 499 | 476 | 1146 | 459 | 459 | 27783 | 2353 | 47829 | 95658000 |
| 14 | ಗದಗ | 1642 | 3661 | 227 | 1798 | 390 | 102 | 621 | 408 | 133 | 16519 | 1261 | 26762 | 53524000 |

| | | | | | | | | | | | | | | |
|---|---|---|---|---|---|---|---|---|---|---|---|---|---|---|
| 15 | ಹಾಸನ | 1526 | 2125 | 132 | 1114 | 142 | 72 | 745 | 255 | 181 | 10600 | 1936 | 18828 | 37656000 |
| 16 | ಹಾವೇರಿ | 1775 | 4353 | 104 | 2297 | 351 | 170 | 500 | 388 | 73 | 22131 | 2198 | 34340 | 68680000 |
| 17 | ಕಲಬುರಗಿ | 3260 | 30076 | 370 | 8056 | 767 | 1082 | 3455 | 819 | 662 | 27745 | 2344 | 78636 | 157272000 |
| 18 | ಕೊಡಗು | 359 | 1247 | 69 | 127 | 17 | 1 | 323 | 54 | 171 | 2799 | 243 | 5410 | 10820000 |
| 19 | ಕೋಲಾರ | 2125 | 7057 | 283 | 874 | 134 | 235 | 1381 | 270 | 138 | 13172 | 2337 | 28006 | 56012000 |
| 20 | ಕೊಪ್ಪಳ | 2188 | 7510 | 194 | 3505 | 507 | 678 | 890 | 741 | 288 | 19319 | 2391 | 38211 | 76422000 |
| 21 | ಮಂಡ್ಯ | 2131 | 5085 | 168 | 1184 | 208 | 203 | 851 | 886 | 140 | 22791 | 4027 | 37674 | 75348000 |
| 22 | ಮೈಸೂರು | 3063 | 26155 | 379 | 2302 | 682 | 465 | 2638 | 1535 | 359 | 39391 | 5256 | 82225 | 164450000 |
| 23 | ರಾಯಚೂರು | 2384 | 11234 | 181 | 6221 | 339 | 303 | 1007 | 938 | 217 | 18859 | 5521 | 47204 | 94408000 |
| 24 | ರಾಮನಗರ | 929 | 1751 | 84 | 548 | 79 | 29 | 457 | 457 | 192 | 8187 | 1326 | 14039 | 28078000 |
| 25 | ಶಿವಮೊಗ್ಗ | 1398 | 3202 | 497 | 1320 | 126 | 97 | 729 | 230 | 202 | 13776 | 945 | 22522 | 45044000 |
| 26 | ತುಮಕೂರು | 2332 | 9923 | 529 | 2256 | 536 | 202 | 1777 | 685 | 328 | 26059 | 4741 | 49368 | 98736000 |
| 27 | ಉಡುಪಿ | 1105 | 1763 | 290 | 83 | 22 | 4 | 315 | 103 | 44 | 6984 | 293 | 11006 | 22012000 |
| 28 | ಉತ್ತರ-ಕನ್ನಡ | 938 | 15113 | 583 | 6740 | 221 | 84 | 903 | 284 | 154 | 18407 | 727 | 44154 | 88308000 |
| 29 | ವಿಜಯಪುರ | 2669 | 5319 | 237 | 2089 | 272 | 116 | 923 | 466 | 346 | 11185 | 1327 | 24949 | 49898000 |
| 30 | ಯಾದಗಿರಿ | 1280 | 6952 | 133 | 2994 | 165 | 145 | 748 | 505 | 311 | 7413 | 1896 | 22542 | 45084000 |
| **Grand Total** | | **59246** | **296655** | **8246** | **74958** | **9249** | **8795** | **35111** | **17193** | **8827** | **589205** | **74822** | **1182307** | **2364614000** |

ಆಯುಕ್ತರು
ಕಾರ್ಮಿಕ ಇಲಾಖೆ